ಶ್ರೀ ಎಂ. ನಾರಾಯಣ ಸ್ವಾಮಿ:– ಈ ಸದನವನ್ನು ಒಂದೂ ಒಂದೂವರೆ ತಿಂಗಳು ನಡೆಸುತ್ತೀರಿ. ನೂರು ದಿನ ಏಂಬತ್ತು ದಿನ. ಒಂದು ದಿನ ಏಕ್ಸ್‌ಟೆಂಡ್ ಮಾಡಿದರೆ ಏನೂ ಆಗುವುದಿಲ್ಲ. ನಮ್ಮ ಅನೇಕ ಸಮಸ್ಯೆಗಳು ಇವೆ ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:– ಇಲ್ಲಿ ಯಾರ ಹೆಸರು ಇದೆಯೋ ಅವರಿಗೆ ಅವಕಾಶ ಕೊಡುವುದಕ್ಕೆ ತೊಂದರೆ ಇಲ್ಲ. I am bound by the decision of the BAC.

ಶ್ರೀ ಎಂ. ನಾರಾಯಣಸ್ವಾಮಿ:– ಯಾರ ಹೆಸರುಗಳು ಇವೆಯೋ ಅವರಿಗೂ ಕೊಡಿ ನಮಗೂ ಅವಕಾಶ ಮಾಡಿಕೊಡಿ. ನಮಗೆ ಮಾತನಾಡತಕ್ಕಂಥ ಅವಕಾಶ ಯಾವಾಗ ಸಿಗುತ್ತದೆ.

ಅಧ್ಯಕ್ಷರು:– ಸಿ. ಭೈರೇಗೌಡ, ರೈತ ಸಂಘದವರು, ಎಂ.ಇ.ಎಸ್. ಚಿಕ್ಕಮಾಧು ಪಿ.ಜಿ.ಆರ್. ಸಿಂಧ್ಯ..

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾಧುಸ್ವಾಮಿಯವರಿಗೆ ಅವಕಾಶ ಮಾಡಿ ಕೊಡಿ. ನಾನು ಮಾತನಾಡಬೇಕಾದರೆ ನನಗೆ 9.30 ಗಂಟೆಯವರೆಗೂ ಮಾತನಾಡಬೇಕು. ನೀವು 10 ನಿಮಿಷ 3 ನಿಮಿಷದಲ್ಲಿ ಮಾತನಾಡಿ ಮುಗಿಸಿ ಅಂದರೆ ಆಗುವುದಿಲ್ಲ ಒಂದೂವರೆ ಗಂಟೆ ಬೇಕಾಗುತ್ತದೆ. ಅವಕಾಶ ಮಾಡಿ ಕೊಟ್ಟರೆ ಮಾತನಾಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1993–94 ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ (ಮುಂದು)

ಶ್ರೀ ಎನ್. ಚಿಕ್ಕಮಾಧು:–ಮಾನ್ಯ ಅಧ್ಯಕ್ಷರೇ, 1993–94 ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತ ಮಾಡುತ್ತಾ ಈ ವಿಚಾರದಲ್ಲಿ ಅನೇಕ ಜನ ಹಿರಿಯ ಸದಸ್ಯರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ನಾನಾದರೂ ಕೂಡ ಈ ವಿಚಾರದಲ್ಲಿ ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳದೆ ಕೆಲವು ವಿಷಯಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ ಗ್ರಾಮೀಣ ವಿದ್ಯುದ್ದೀಕರಣ ಕಾರ್ಯಕ್ರಮದ ಅಡಿಯಲ್ಲಿ 1992–93ನೇ ಸಾಲಿನಲ್ಲಿ 49 ಸಾವಿರ ಜನರನ್ನು 1993–94ನೇ ಸಾಲಿನಲ್ಲಿ ಒಂದು ಲಕ್ಷ 71 ಸಾವಿರ ಭಾಗ್ಯ ಜ್ಯೋತಿ ಅಳವಡಿಸಿಕೊಳ್ಳಬೇಕೆನ್ನುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ.

ಈ ಭಾಗ್ಯಜ್ಯೋತಿಯನ್ನು ನಾವು ಹಾಕಿದಾಗ ಕಡ್ಡಾಯವಾಗಿ ಬಹುತೇಕ ಕಡುಬಡವರ ಜನತಾ ಕಾಲೋನಿನಲ್ಲಿ ವಾಸ ಮಾಡತಕ್ಕಂಥ ಕಡೆ ಹಾಕಿಕೊಡಬೇಕೆನ್ನುವುದು ಸರ್ಕಾರದ ಮೂಲ ಉದ್ದೇಶ. ಆದರೆ ಸರ್ಕಾರ ಈ ಕಾಲೋನಿಗಳಲ್ಲಿ ಅಡಿಷನಲ್ ಸ್ಟ್ರೀಟ್ ಲೈಟ್ಸ್ ಹಾಕಿಕೊಡುವ ಸಲುವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿದರೂ ಕೂಡ ಕಂಬ ಇಲ್ಲ ಎಂದು ಹೇಳಿ ಅನ್ಯಾಯ ಮಾಡುತ್ತಿದ್ದಾರೆ ಪ್ರತಿಯೊಂದು ಗ್ರಾಮದ ಜನತಾ ಕಾಲೋನಿಗಳಿಗೆ ಅಡಿಶನಲ್ ಸ್ಟ್ರೀಟ್‌ಲೈಟ್ಸ್ ಕಡ್ಡಾಯವಾಗಿ ಹಾಕಿ ಕೊಡಬೇಕು. ಅದಕ್ಕೆ ಮಾನ್ಯ ವಿದ್ಯುತ್‌ಖಾತೆ ಮಂತ್ರಿಗಳು ಇದ್ದಾರೆ ಅವರು ಇದರ ಕಡೆ ಹೆಚ್ಚಿನ ಗಮನ ಹರಿಸಿ ರಾಜ್ಯದಲ್ಲಿ ಗ್ರಾಮೀಣ ಬಡವರಿಗೆ ಜನತಾ ಕಾಲೋನಿಗಳಿಗೆ ಹೆಚ್ಚು ವಿದ್ಯುತ್ ಕಂಬಗಳನ್ನು ಅಳವಡಿಸಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಕೋರಂ ಇದೆಯೇ ?

ಅಧ್ಯಕ್ಷರು:– ಇದೆ. ತಾವು ಮಾತನಾಡಿ.

(ಗೊಂದಲ)

ಶ್ರೀ ಎನ್. ಚಿಕ್ಕಮಾಧು:– ಮಾನ್ಯ ಅಧ್ಯಕ್ಷರೇ.

ಶ್ರೀ ಆರ್. ದಯಾನಂದರಾವ್:– ತಾವು ಮಾತನಾಡಿದ ತಕ್ಷಣ ಕೋರಂ ಮುಗಿಯುತ್ತದೆ.

ಶ್ರೀ ಎನ್. ಚಿಕ್ಕಮಾಧು:– ಅಕ್ಷಯಾ ಕಾರ್ಯಕ್ರಮ ನಮ್ಮ ಪಕ್ಷದ ಸರ್ಕಾರದ ಕಾರ್ಯಕ್ರಮ. ಆ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿ ಮುಂದುವರಿಸುತ್ತೇವೆಂದು ಈ ಆಯವ್ಯಯದಲ್ಲಿ ತಿಳಿಸಿದ್ದಾರೆ. ಇದು ಬದಲಾವಣೆ ವಿಚಾರ. ಅಕ್ಷಯ ಯೋಜನೆಯಡಿಯಲ್ಲಿ ದಯಮಾಡಿ ಇದನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಮಕ್ಕಳ ಹಾಜರಾತಿ ಆಧಾರದ ಮೇಲೆ ಏನು 1 ರೂಪಾಯಿ ಕೊಡುವಂಥ ಪದ್ಧತಿ ಏನು ಇತ್ತು, ಅದನ್ನು ಕಡ್ಡಾಯವಾಗಿ ಮುಂದುವರಿಸಬೇಕಾಗುತ್ತದೆ. ಏಕೆಂದರೆ ಹಣ ಕೊಡುವುದನ್ನು ಬದಲಾಯಿಸಿ ನೀವು ಬಟ್ಟೆ ಕೊಡತಕ್ಕಂಥಾದ್ದು ಅಥವಾ ಸ್ಕಾಲರ್‌ಶಿಪ್ ಕೊಡುವ ವಿಚಾರ ಮಾಡುತ್ತಿದ್ದೀರಿ, ಆದರೆ ಆ ಒಂದು ಪ್ರತಿನಿತ್ಯ ಹಾಜರಾತಿ ಉದ್ದೇಶ ಕಡುಬಡವರ ಮಕ್ಕಳು ಶಾಲೆಗೆ ಹಾಜರಾತಿ ಆದರೆ ವಿದ್ಯಾಭ್ಯಾಸ ಹೇಳಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಶ್ರದ್ಧೆಯಿಂದ ಕಲಿಯುವುದಕ್ಕೆ ಪ್ರತಿದಿನದ ಹಾಜರಾತಿ ಮೇಲೆ ನಾವು 1 ರೂಪಾಯಿ ಕೊಡುತ್ತಿದ್ದೇವೆ. ಅದೇ ಸೂಕ್ತ. ಅದಕ್ಕೆ ದಯಮಾಡಿ ಆ ದಿಕ್ಕಿನಲ್ಲಿ ಯೋಚನೆ ಮಾಡಬೇಕೆಂದು ನನ್ನ ಮನವಿ ಮಾಡುತ್ತೇನೆ. ಇನ್ನು ಆಶ್ರಯ ಯೋಜನೆ ಅಡಿಯಲ್ಲಿ ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿಕೊಡುತ್ತೇವೆ ಎಂದು ನಮ್ಮ ಸರ್ಕಾರ ಘೋಷಣೆ ಮಾಡಿತ್ತು. ಅಲ್ಲದೆ ಪ್ರತಿ ಶಾಸಕರು ಕೂಡ 1 ಸಾವಿರ ಫಲಾನುಭವಿಗಳನ್ನು ಪಟ್ಟಿ ಮಾಡಿ ಕೊಟ್ಟಿದ್ದೇವೆ.

ಆಯ್ಕೆ ಮಾಡಿದ ಫಲಾನುಭವಿಗಳಿಗೆ ಬಹಳ ಗೊಂದಲಮಯವಾಗಿದ್ದು, ಆ ವಿಚಾರವನ್ನು ಸ್ಥಳೀಯ ಶಾಸಕರು ವಿವರಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ಸಾಲಿನಲ್ಲಿ 1000 ಮನೆಗಳನ್ನಾದರೂ ಕಟ್ಟಿಸಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೊಂದು 'ನೆರಳಿನ ಭಾಗ್ಯ' ಎಂದು ಯೋಜನೆ ಮಾಡಿ, ಗ್ರಾಮಾಂತರ ಪ್ರದೇಶಗಳಲ್ಲಿ ಹುಲ್ಲು ಮನೆಯಲ್ಲಿ ವಾಸ ಮಾಡತಕ್ಕವರಿಗೆ ಹೊಸ ಮನೆಗಳನ್ನು ಕಟ್ಟಿಸಿಕೊಡುವುದಕ್ಕಾಗಿ 3 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಹುಲ್ಲು ಮನೆಗಳಿಗೆ ಮೇಲ್ಛಾವಣಿ ಹಾಕಿಸುವುದಕ್ಕೆ 3 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿರುವುದು, ಆ ಹಣ ಯಾವುದಕ್ಕೂ ಸಾಕಾಗುವುದಿಲ್ಲ. 15x20 ಅಡಿ ಜಾಗದಲ್ಲಿರುವ ಮನೆಗೆ ಮೇಲ್ಛಾವಣಿ ಹಾಕಬೇಕಾದರೆ ಕನಿಷ್ಠ 20 ಜಂತಿಗಳು, 5 ನೂರು ಅಡಿ ರೀಪರ್‌ಗಳು, 500 ನೂರು ಹೆಂಚುಗಳು ಬೇಕಾಗುತ್ತವೆ. ಇಷ್ಟನ್ನು ತರಬೇಕಾದರೆ ಸುಮಾರು 5ರಿಂದ 6 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಈ 3 ಸಾವಿರ ರೂಪಾಯಿಗಳ ಬದಲಾಗಿ 6 ಸಾವಿರ ರೂಪಾಯಿಗೆ ಹೆಚ್ಚಿಳ ಮಾಡಿದರೆ ನಿಜವಾಗಿ ಬಡವರಿಗೆ ಅನುಕೂಲವಾಗುತ್ತದೆಯೆಂದು ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ, ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡುವುದಕ್ಕೆ ಹಿಂದೆ ಇದ್ದ 2.20ಕೋಟಿ ರೂಪಾಯಿಗಳ ಬದಲಾಗಿ ಈ 3.2ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ರಾಜ್ಯದಲ್ಲಿ ಹಿಂದುಳಿದವರು ಯಾರು ಎಂದು ಇನ್ನೂ ನಿಖರವಾಗಿ ಗುರುತಿಸುವುದಕ್ಕಾಗಿಲ್ಲ. ನ್ಯಾಯಧೀಶರಾಗಿದ್ದ ಚಿನ್ನಪ್ಪರೆಡ್ಡಿಯವರ ಆಯೋಗದ ವರದಿ ಸರ್ಕಾರದ ಮುಂದಿದೆ. ಆದರೆ ಆ ವರದಿಯನ್ನು ಇನ್ನೂ ಜಾರಿ ಮಾಡದೇ ಇರುವುದರಿಂದ ಕರ್ನಾಟಕ ರಾಜ್ಯದಲ್ಲಿ ಯಾವ ಯಾವ ಜಾತಿಗಳು ಹಿಂದುಳಿದ ವರ್ಗಕ್ಕೆ ಸೇರಿವೆಯೆಂದು ನಿಖರವಾಗಿ ಹೇಳುವುದಕ್ಕಾಗುವುದಿಲ್ಲ. ಬ್ರಾಹ್ಮಣರು, ವೈಶ್ಯರು ಇವರುಗಳನ್ನು ಬಿಟ್ಟರೆ ಉಳಿದೆಲ್ಲಾ ಜಾತಿಗಳೆಲ್ಲಾ ಹಿಂದುಳಿದ ವರ್ಗಕ್ಕೇ ಸೇರುತ್ತವೆ. ನೀವು ಕೊಟ್ಟಿರುವ 3.2 ಕೋಟಿ ರೂಪಾಯಿ ಹಣದಲ್ಲಿ ಈ ಜಾತಿಗಳವರ ಅಭಿವೃದ್ಧಿ ಕಾರ್ಯಕ್ರಮವನ್ನು ಹೇಗೆ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಬೇಕು. ಆಮೇಲೆ ಬರುವ ಡಿಸೆಂಬರ್ ತಿಂಗಳೊಳಗೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮಾಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ

ಹೇಳಿದ್ದಾರೆ ಮತ್ತು ಸರ್ಕಾರವೂ ಕೂಡ ಹೇಳಿದೆ. ಈ ಚುನಾವಣೆಯಲ್ಲಿ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ಕೊಡುತ್ತೇವೆಂದು ಹೇಳಿದ್ದಾರೆ. ಯಾವ ರೀತಿ ಹಿಂದುಳಿದ ವರ್ಗದವರನ್ನು ಗುರುತಿಸುತ್ತಾರೆಂದು ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ, ಮಾನ್ಯ ಚಿನ್ನಪ್ಪ ರೆಡ್ಡಿಯವರು ಏನು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ? ಕೆಲವು ಜಾತಿಗಳವರು, ನಮಗೆ ಕೈ ಬಿಟ್ಟಿದ್ದಾರೆ, ಇದರಿಂದ ನಮಗೆ ಅನ್ಯಾಯವಾಗಿದೆಯೆಂದು ಪ್ರಸ್ತಾಪ ಮಾಡಿರಬಹುದು ಇದರ ಬಗ್ಗೆ ಸರ್ಕಾರ ಗಮನಹರಿಸಿ, ಯಾವ ಜಾತಿಗಳಿಗೆ ಅನ್ಯಾಯವಾಗಿದೆ ಎಂಬುದನ್ನು ನೋಡಿ ಅಂಥಾ ಜಾತಿಗಳನ್ನೂ ಹಿಂದುಳಿದ ವರ್ಗಕ್ಕೆ ಸೇರಿಸಿಕೊಂಡು ಚಿನ್ನಪ್ಪ ರೆಡ್ಡಿಯವರ ಆಯೋಗದ ವರದಿಯನ್ನು ಜಾರಿಗೆ ಕೊಟ್ಟರೆ ಖಂಡಿತವಾಗಿಯೂ ಹಿಂದುಳಿದ ವರ್ಗದವರಿಗೆ ನ್ಯಾಯ ದೊರಕುತ್ತದೆ.

ಆಮೇಲೆ; ಈ ಮಾರ್ಚ್ ಅಂತ್ಯದೊಳಗೆ 7 ಸಾವಿರ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆಂದು ಮಾನ್ಯ ಶಿಕ್ಷಣ ಸಚಿವರು ಭರವಸೆ ಕೊಟ್ಟರು. ಹಿಂದುಳಿದ ವರ್ಗದವರನ್ನು ಸರಿಯಾಗಿ ಗುರುತಿಸದೆ ಈ 7 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಂಡರೆ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತದೆ. ಅದಕ್ಕೋಸ್ಕರ ಯಾವುದಕ್ಕೂ ತಡ ಮಾಡದೆ ಸರ್ಕಾರದವರು ಈ ಬಗ್ಗೆ ವಿಶೇಷವಾದ ಗಮನ ಹರಿಸಿ, ಚಿನ್ನಪ್ಪರೆಡ್ಡಿಯವರ ಆಯೋಗದ ವರದಿ ಏನು ಸರ್ಕಾರದ ಮುಂದೆ ಇದೆ ? ಅದನ್ನು ತಕ್ಷಣ ಜಾರಿಗೆ ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. (ಮಾನ್ಯ ಅಧ್ಯಕ್ಷರು ಈ ಸಂದರ್ಭದಲ್ಲಿ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ಆಮೇಲೆ ದೇವರಾಜ್ ಅರಸ್ ಅವರ ಹೆಸರಿನಲ್ಲಿ ಸಂಶೋಧನಾ ಸಂಸ್ಥೆಯನ್ನು ಹೊಸದಾಗಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮ ನಿಜವಾಗಲೂ ಸ್ವಾಗತಾರ್ಹ ಕ್ರಮ. ಮಾನ್ಯ ದೇವರಾಜ ಅರಸರು ಮೂಲಭೂತವಾಗಿ ಹಿಂದುಳಿದ ವರ್ಗಗಳ ಬಗ್ಗೆ ಮತ್ತು ಶೋಷಿತ ವರ್ಗಗಳ ಬಗ್ಗೆ ಚಿಂತನೆ ಮಾಡುತ್ತಿದ್ದರು. ಸರ್ಕಾರ ಇದನ್ನು ಆಲೋಚನೆ ಮಾಡಬೇಕು. ಆದ್ದರಿಂದ ಚಿನ್ನಪ್ಪರೆಡ್ಡಿಯವರ ವರದಿಯನ್ನು ಸರ್ಕಾರ ಜಾರಿ ಕೊಡದೇ ಇದ್ದರೆ ದೇವರಾಜ ಅರಸರ ಸಂಶೋಧನಾ ಸಂಸ್ಥೆಯನ್ನು ಪ್ರಾರಂಭ ಮಾಡಿದರೂ ಸಫಲವಾಗುವುದಿಲ್ಲ. ದೇವರಾಜ ಅರಸರ ಸಂಶೋಧನಾ ಸಂಸ್ಥೆಯನ್ನು ಪ್ರಾರಂಭ ಮಾಡಬೇಕೆಂದು ತಮಗೆ ಇದ್ದರೆ, ಕೂಡಲೇ ಚಿನ್ನಪ್ಪರೆಡ್ಡಿಯವರ ಆಯೋಗದ ವರದಿಯನ್ನು ಜಾರಿಗೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆಮೇಲೆ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದ ಜಮೀನುಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರಕ್ಕೆ 10.2 ಲಕ್ಷ ಅರ್ಜಿಗಳು ಬಂದಿವೆ, ಅದರಲ್ಲಿ 1.54 ಲಕ್ಷ ಅರ್ಜಿಗಳನ್ನು ವಿಲೇ ಮಾಡಿ 87,444 ಎಕರೆ ಜಮೀನನ್ನು ಸಕ್ರಮಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಇನ್ನು 9.32 ಲಕ್ಷ ಚಿಲ್ಲರೆ ಅರ್ಜಿಗಳನ್ನು ನಮ್ಮ ಸರ್ಕಾರ ವಿಲೇವಾರಿ ಮಾಡಬೇಕಾಗಿದೆ. ಇದನ್ನು ಮಾಡಬೇಕಾದರೆ, ಒಬ್ಬ ಅರ್ಜಿದಾರ ನಾನು 15 ವರ್ಷಗಳಿಂದ 2 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದೇನೆ, ಇದನ್ನು ಸಕ್ರಮಗೊಳಿಸಿ ಎಂದು ಅರ್ಜಿ ಸಲ್ಲಿಸಿದ್ದಾನೆ.

ನಿಖರವಾಗಿ ಆತನು ಎಷ್ಟು ಎಕರೆ ಸಾಗುವಳಿ ಮಾಡಿಕೊಂಡು ಬಂದಿದ್ದಾನೆ ಎಂಬುದನ್ನು ನೋಡಬೇಕು. ಅದನ್ನು ನಿರ್ದಿಷ್ಟವಾಗಿ ಹೇಳುವ ಶಕ್ತಿಯನ್ನು ಹೊಂದಿರುವುದಿಲ್ಲ. ನಾವು ಮಂಜೂರಾತಿ ಮಾಡಬೇಕಾದರೆ ಅವನ ಜಾಗವನ್ನು ಅಳತೆ ಮಾಡಿಸಿಕೊಡಬೇಕು. ಇಲ್ಲದಿದ್ದರೆ ಆತನ ಜಮೀನು ಸಿಂಧುವಾಗುವುದಿಲ್ಲ ಮತ್ತು ತಪ್ಪು ಕೂಡ ಆಗುತ್ತದೆ. ನಾವು ಅಳತೆ ಮಾಡಿಸಬೇಕಾದರೆ ನಾವು ಸರ್ವೇಯರ್ಸ್‌ನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಸರ್ವೇಯರನ್ನು ನೇಮಕಾತಿ ಮಾಡದಿದ್ದರೆ, ಜಮೀನು ಅಳತೆ ಮಾಡಿಸುವುದಕ್ಕೂ ಆಗುವುದಿಲ್ಲ. ಇದನ್ನು ಸಕ್ರಮಗೊಳಿಸುವ ಕಾರ್ಯವೂ ಆಗುವುದಿಲ್ಲ. ಹೊಸತಾಗಿ ನೇಮಕ ಮಾಡತಕ್ಕಂಥ ವಿಚಾರದಲ್ಲಿ ಶೈಕ್ಷಣಿಕ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಇಲಾಖೆ ಹೊರತಾಗಿ ಎಂದು ಹೇಳಿದ್ದಾರೆ. ಸರ್ಕಾರ ಇತ್ತ ಕಡೆ ಗಮನ ಹರಿಸಿ, ಸರ್ವೇಯರನ್ನು

ನೇಮಕಾತಿ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಆರಾಧನ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡು ತ್ತಾ ಕೆಲವು ಮಾನ್ಯ ಸದಸ್ಯರುಗಳು ಹೇಳಿದರು. ದೇವರಲ್ಲಿಯೂ ಕೂಡ ಹಿಂದುಳಿದ ದೇವರು ಹರಿಜನರ ದೇವರು ಎಂದು ಪ್ರತ್ಯೇಕ ಮಾಡುತ್ತಿದ್ದೀರಿ ಎಂದು ಹೇಳಿದರು. ನಾನು ಒಬ್ಬ ಗ್ರಾಮಾಂತರ ಪ್ರದೇಶದಿಂದ ಬಂದವನು. ನಮ್ಮ ಊರುಗಳಲ್ಲಿಯೂ ಕೂಡ ಹಿಂದುಳಿದವರ ಮತ್ತು ಹರಿಜನರ ಕೇರಿಯಲ್ಲಿನ ದೇವಾಲಯಗಳು ಹೇಗಿವೆ ಅಂದರೆ, ಎರಡು ಸೈಜುಗಲ್ಲನ್ನು ಇಟ್ಟು ಮೇಲ್ಗಡೆ ಒಂದು ಚಪ್ಪಡಿಗಲ್ಲನ್ನು ಹಾಕಿ, ಕೆಳಗಡೆ ಒಂದು ಗುಂಡು ಕಲ್ಲು ಇಟ್ಟು ಅದನ್ನು ಮಾರಮ್ಮ ಎಂದು ಪೂಜೆ ಮಾಡುತ್ತಾರೆ. ಇಂಥ ದೇವಾಲಯಗಳಿಗೆ ಒಂದು ಶಾಶ್ವತವಾದ ಕಟ್ಟಡ ಇರಲಿ ಎನ್ನುವ ದೃಷ್ಟಿಯಿಂದಲೇ ಸರಕಾರದವರು ಆರಾಧನ ಯೋಜನೆಯನ್ನು ಜಾರಿಗೆ ಕೊಟ್ಟರು. ಇದು ಸ್ವಾಗತಾರ್ಹವಾದ ಯೋಜನೆಯಾಗಿದೆ. ನಾವು ಸಾಮಾನ್ಯವಾಗಿ, ಮಾರಮ್ಮ, ಮಸಣಮ್ಮ, ಜಿಂಕಮ್ಮ ಮುಂತಾಗಿ ದೇವರನ್ನು ಪೂಜೆ ಮಾಡತಕ್ಕಂಥವರು. ನಮಗೆ ವೆಂಕಟರಮಣ ಸ್ವಾಮಿ, ತಿರುಪತಿ ತಿಮ್ಮಪ್ಪ, ರಾಘವೇಂದ್ರರನ್ನು ಪೂಜೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮನ್ನು ಈ ದೇವರುಗಳಿಗೇ ಹಿಂದಿನವರು ಸೀಮಿತ ಮಾಡಿಬಿಟ್ಟಿದ್ದರು. ಅಂಥ ದೇವಾಲಯಗಳನ್ನು ಕಟ್ಟಲು ಸರಕಾರದವರು ಗಮನಕೊಟ್ಟಿರತಕ್ಕಂಥಾದ್ದು ಮೆಚ್ಚತಕ್ಕಂಥ ಕೆಲಸವಾಗಿದೆ. ನನ್ನ ತಾಲ್ಲೂಕಿನಲ್ಲಿ ಸುಮಾರು ಮೂರುವರೆ ಲಕ್ಷ ರೂಪಾಯಿಗಳನ್ನು ಪಡೆದು ಸುಮಾರು 14 ದೇವಾಲಯಗಳನ್ನು ತಲಾ 25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಈಗಾಗಲೇ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಇದು ಜನಗಳಿಗೆ ಬಹಳ ಮೆಚ್ಚುಗೆಯಾದಂಥ ವಿಚಾರವಾಗಿದೆ. ಇದರ ಬಗ್ಗೆ ಸರಕಾರ ಒಳ್ಳೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅಂತರ್ಜಾತಿ ವಿವಾಹವಾದವರಿಗೆ ಸರಕಾರದವರು ಐದು ಸಾವಿರ ರೂಪಾಯಿಗಳಿಂದ 20 ಸಾವಿರ ರೂಪಾಯಿಗಳಿಗೆ ಏರಿಸಿದೆ. ಇದು ಒಪ್ಪತಕ್ಕಂಥ ವಿಚಾರ. ಜಾತೀಯತೆಯನ್ನು ಹೋಗಲಾಡಿಸುವಲ್ಲಿ ಇದು ಸಹಕಾರಿಯಾಗಬಲ್ಲುದು. ಆದರೆ ಹೀಗೆ ಹಣ ಕೊಡುವುದರಿಂದ ಅಂಥ ಯಾವ ಪ್ರಯೋಜನವಾಗಲಾರದು. ಅದನ್ನು ಸುಮ್ಮನೆ ಖರ್ಚು ಮಾಡತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಅಂತರ್ಜಾತೀಯ ವಿವಾಹವನ್ನು ಮಾಡಿಕೊಳ್ಳಲು ಮುಂದೆ ಬರುತ್ತಾರೆ, ಅಂಥವರಿಗೆ ಸರಕಾರಿ ಉದ್ಯೋಗವನ್ನು ದೊರಕಿಸಿಕೊಟ್ಟರೆ ಅವರಿಗೆ ಜೀವನೋಪಾಯದ ದಾರಿ ತೋರಿಸಿದಂತಾಗುತ್ತದೆ. ಈ ಬಗ್ಗೆ ಸರಕಾರವು ಯೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ 1992–93ನೇ ಸಾಲಿನಲ್ಲಿ 66.4 ಕೋಟಿ ರೂ.ಗಳು ಮತ್ತು 1993–94ರಲ್ಲಿ 108.60 ಕೋಟಿಗಳು. ಹಿಂದಿನ ವರ್ಷಕ್ಕಿಂತಲೂ ಈ ವರ್ಷಕ್ಕೆ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ಕೆಲವು ಶರತ್ತುಗಳ ಪ್ರಕಾರವೇ ಕುಡಿಯುವ ನೀರಿನ ಯೋಜನೆಗಳನ್ನು ಮಾಡುತ್ತಾರೆ. ಹೀಗೆ ಕುಡಿಯುವ ನೀರಿನ ಯೋಜನೆಗೆ ಈ ರೀತಿಯ ರಿಸ್ಟ್ರಿಕ್ಷನ್ಸ್ ಹಾಕಬಾರದು. ಕೆಲವು ಚಿಕ್ಕ ಗ್ರಾಮಗಳಲ್ಲಿಯೂ ಕೂಡ ಎಡಡು ಕಿ.ಮೀ. ಅಂತರದಲ್ಲಿ ನೀರು ಸಿಕ್ಕುವುದಿಲ್ಲ. ಇಷ್ಟು ದೂರ ನಮ್ಮ ತಾಯಂದಿರು, ಅಕ್ಕಂದಿರು ನೀರು ಹೊತ್ತು ತರುವ ಕೆಲಸ ಬಹಳ ಕಷ್ಟವಾದುದು. ಎಲ್ಲಿ ನೀರಿನ ಅಗತ್ಯವಿದೆ ಅಲ್ಲಿ ಕಾನೂನುಗಳನ್ನು ಸಡಿಲಗೊಳಿಸಿ ನೀರನ್ನು ಒದಗಿಸಬೇಕು. ಜನಸಂಖ್ಯೆ ಆಧಾರವನ್ನು ತೆಗೆದುಕೊಳ್ಳಬಾರದು. ಈ ಬಗ್ಗೆ ಕಾನೂನುಗಳನ್ನು ಸಡಿಲಗೊಳಿಸಿ ನೀರು ಸರಬರಾಜನ್ನು ಗ್ರಾಮಾಂತರಗಳಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಮಲೆನಾಡು ಅಭಿವೃದ್ಧಿ ಯೋಜನೆ. ಕಳೆದ ಸಾಲಿನಲ್ಲಿ ಕೂಡ ಅದಕ್ಕೆ ಹಣವನ್ನು ಇಟ್ಟಿದ್ದರು. ನನ್ನ ಕ್ಷೇತ್ರವನ್ನು ಕೂಡ ಈ ಯೋಜನೆಯ ವ್ಯಾಪ್ತಿಯಲ್ಲಿ ಸೇರಿಸಿದ್ದಾರೆ. ಆದರೆ ಇದುವರೆಗೂ ಕೂಡ ನಮ್ಮ ಕ್ಷೇತ್ರಕ್ಕೆ ಒಂದು ಪೈಸೆ ಹಣವನ್ನು ಕೂಡ ಬಿಡುಗಡೆ ಮಾಡಿಲ್ಲ. ಸರಕಾರದ ಆದೇಶದ ಪ್ರಕಾರ ನಾವು ಯಾವ ಯಾವ ಭಾಗವನ್ನು ಸೇರಿಸಿದ್ದಾರೆ ಎಂಬ ಬಗ್ಗೆ ತಿಳಿದುಕೊಂಡು ನಮ್ಮ ಭಾಗದಲ್ಲಿ ಯಾವ ಯಾವ ಯೋಜನೆಗಳನ್ನು ಮಾಡಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದೇವೆ.

ಇನ್ನು ಮೇಲೆ ಆದರೂ ಸರ್ಕಾರ ಅದನ್ನು ಗಮನಹರಿಸಿ ಮಲೆನಾಡು ಅಭಿವೃದ್ಧಿಗೆ ಹಣವನ್ನು ಬಿಡುಗಡೆ ಮಾಡಿ ಆ ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಾಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಮಾನ್ಯ ಎ.ಟಿ. ರಾಮಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಎ.ಟಿ. ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈಗ ಸಭೆಯಲ್ಲಿ ಕೋರಂ ಇಲ್ಲ. ಕಾಲವೂ ಕೂಡ ಮಿಳಂಬವಾಗಿದೆ. ಕೋರಂ ಇಲ್ಲದೆ ಹೇಗೆ ಮಾತನಾಡುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾವು ಅಂತೂ ಕುಳಿತುಕೊಂಡಿದ್ದೇವೆ. ರಾಮಸ್ವಾಮಿಯವರ ಭಾಷಣವನ್ನು ನಾವು ಕೇಳುತ್ತೇವೆ. ಆದರೆ ಎಷ್ಟು ಗಂಟೆಯವರೆಗೆ ಕುಳಿತುಕೊಳ್ಳಬೇಕೆಂದು ಹೇಳಿದರೆ ಒಳ್ಳೆಯದು.

ಶ್ರೀ ಎ.ಟಿ. ರಾಮಸ್ವಾಮಿ:– ಸಭೆಯಲ್ಲಿ ಕೋರಂ ಇಲ್ಲ.

ಪ್ರಕಟಣೆ

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ: 10–3–1993ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

1. 1993ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕ.

2. 1993ನೇ ಇಸವಿಯ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕ

ನಾಳೆ ಬೆಳಿಗ್ಗೆ 10-00 ಗಂಟೆಗೆ ಮುಖ್ಯಮಂತ್ರಿಯವರಿಂದ ಉತ್ತರ.

(ಸದನವು ಸಂಜೆ 7-30ಕ್ಕೆ ಮುಕ್ತಾಯವಾಗಿ ನಾಳೆ ದಿನಾಂಕ: 11-3-1993ನೇ ಗುರುವಾರ ಪುನಃ 10-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.